ಬೆಂಗಳೂರಿನಲ್ಲಿ ಸ್ಥಾಪಿಸಿರುವ ಶಿವಾಜಿ ಪ್ರತಿಮೆಯನ್ನು ತೆಗೆಸುವುದರ ಬಗ್ಗೆ

+ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ಈ ಬೆಳಿಗ್ಗೆ ಶಿವಾಜಿ ಪ್ರತಿಮೆ ಬಗ್ಗೆ ಹೆಚ್‌ಯುಡಿ ಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಈ ಬಗ್ಗೆ ಅನೇಕ ಸನ್ಮಾನ್ಯ ಸದಸ್ಯರು ತಮ್ಮ ಅನಿಸಿಕೆಗಳನ್ನು ಕೂಡ ಹೇಳಿದ್ದಾರೆ. ತಮಗೂ ಕೂಡ ಗೊತ್ತಿದೆ. ನಾನು ಅದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನನ್ನ ಸಹೋದ್ಯೋಗಿಗಳು ಹಾಗೂ ಹಿರಿಯ ಸಚಿವರಾದಂಥ ಸನ್ಮಾನ್ಯ ರಂಗನಾಥ್‌ರವರು ಕೂಡ ಬಹಳ ಚೆನ್ನಾಗಿ ಸುಂದರವಾಗಿ ವಿವರಿಸಿ ಈಗಾಗಲೇ ಹೇಳಿದ್ದಾರೆ. ಒಂದು ಮಾತು ನಾವೆಲ್ಲರೂ ಕೂಡ ಒಪ್ಪಿಕೊಂಡಂಥ ರೀತಿಯಲ್ಲಿ ಶಿವಾಜಿ ಮಹಾರಾಜ್ ಯಾವುದೇ ಒಂದು ಪಂಗಡಕ್ಕೆ ಸೇರಿದಂಥ ನಾಯಕರಲ್ಲ. ಅವರು ಇಡೀ ರಾಷ್ಟ್ರಕ್ಕೆ ಸೇರಿದಂಥ ಒಂದು ದೊಡ್ಡ ಆಸ್ತಿ. ಇತಿಹಾಸದ ಆಸ್ತಿ. ಮತ್ತು ಅವರ ಬಾಲ್ಯದ ಇತಿಹಾಸವನ್ನು ನೋಡಿದರೂ ಕೂಡ ಅವರ ತಂದೆ ಕನ್ನಡನಾಡಿನಲ್ಲಿದ್ದರು. ಅವರ ತಂದೆ ಷಾಜಿಯವರು ಬಹಳ ವರ್ಷಗಳ ಕಾಲ ಇಲ್ಲಿದ್ದರು. ಅವರ ಸಮಾಧಿ ಕೂಡ ಇಲ್ಲಿದೆ. ಒಂದು ಲೆಕ್ಕದಲ್ಲಿ ಅವರು ಕನ್ನಡಿಗರೇ. ನೀವು ನಾವು ಹೇಗೆ ಕನ್ನಡಿಗರೋ, ಅವರು ಕೂಡ ಒಂದು ರೀತಿಯಲ್ಲಿ ಕನ್ನಡಿಗರೇ. ಮತ್ತು ಅವರ ಸಂಬಂಧದ ಬಗ್ಗೆ ಅನೇಕ ಬಾರಿ ಚರಿತ್ರೆಯನ್ನು ನೋಡಿದರೂ ಕೂಡ ಅವರು ಕರ್ನಾಟಕದ ಜೊತೆಯಲ್ಲ ಬಹಳ ಅನ್ಯೋನ್ಯತೆಯಿಂದ ಕೆಲಸ ಮಾಡಿದಂಥ ಒಬ್ಬ ಧೀಮಂತ ರಾಷ್ಟ್ರೀಯ ನಾಯಕ. ಅಂಥವರ ಪ್ರತಿಮೆ ಉದ್ಘಾಟನೆಯಾಗಿದೆ. ಅದು ನಮ್ಮ ಸರ್ಕಾರಕ್ಕೆ ನೇರವಾಗಿ ಬರುವುದಿಲ್ಲ. ಬೆಂಗಳೂರು ಮಹಾನಗರಪಾಲಿಕೆಯವರು ಮಾಡಿದ್ದಾರೆ. ಬಹಳ ವರ್ಷಗಳ ಕಾಲ ಅಂದರೆ ನಾಲ್ಕು ವರ್ಷಗಳ ಕಾಲದಿಂದ ಅದು ಉದ್ಘಾಟನೆಯಾಗದೆ ಹಾಗೆಯೇ ಉಳಿದಿತ್ತು. ಅದು ಹಾಗೆಯೇ ಉಳಿಯುವುದು ಕೂಡ ಒಂದು ರೀತಿ ಅವಮಾನಕರ ಎಂದು ಅದು ಉದ್ಘಾಟನೆಯಾಯಿತು. ಈಗ ಪ್ರತಿಮೆ ಅಲ್ಲಿದೆ. ಅವರು ಅಲ್ಲಿ ಹುಟ್ಟಿದ್ದು, ಇಲ್ಲಿ ಬೆಳೆದಿದ್ದಾರೆ. ಅವರ ತಂದೆಯವರೂ ಕೂಡ ಇಲ್ಲಿದ್ದರು. ಮತ್ತೆ ಅವರು ಕನ್ನಡಿಗರ ಜೊತೆಯಲ್ಲಿ ಅನ್ಯೋನ್ಯತೆಯಿಂದ ಇದ್ದರು. ಈ ರೀತಿ ಇರುವಾಗ ಅವರಿಗೆ ನಾವು ಒಂದು ಭಾಷೆಯ, ಒಂದು ಪ್ರದೇಶದ ಬಣ್ಣ ಕಟ್ಟುವುದರಿಂದ ಅಷ್ಟು ಶೋಭೆ ನಮ್ಮ ದೇಶಕ್ಕೆ ನಮ್ಮ ರಾಜ್ಯಕ್ಕೆ ಬರುವುದಿಲ್ಲ, ನಮಗೂ ಕೂಡ ಬರುವುದಿಲ್ಲ, ಕನ್ನಡಿಗರಿಗೂ ಕೂಡ ಬರುವುದಿಲ್ಲ. ಪಾಟೀಲ್ ಪುಟ್ಟಪ್ಪನವರೂ ಕೂಡ ಸ್ಪಷ್ಟವಾದಂಥ ಹೇಳಿಕೆಯನ್ನು ಕೊಟ್ಟಿದ್ದಾರೆ."ಶಿವಾಜಿ ಪ್ರತಿಮೆ ಬಗ್ಗೆ ಕನ್ನಡದ ಬಣ್ಣ ಬೇಡ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ತಮಗೆ ಗೊತ್ತಿದೆ; ಡಾಕ್ಟರ್ ವಿಶ್ವೇಶ್ವರಯ್ಯ ಅವರ ಪ್ರತಿಮೆಯನ್ನು ಇವತ್ತು ಹೈದರಾಬಾದಿನ ಬಹಳ ಪ್ರಮುಖವಾದಂಥ ಪ್ರತಿಷ್ಠಿತವಾದ ಸ್ಥಳದಲ್ಲಿ ಸ್ಥಾಪಿಸಿದ್ದಾರೆ.

ಇವತ್ತು ಅವರು ಕನ್ನಡಗರು ಎಂದು ಹೇಳಿ ಅಲ್ಲಿ ಪ್ರಾದೇಶಿಕ ಭಾವನೆಗಳನ್ನು ಕೆರಳಿಸತಕ್ಕಂಥ ಮಾತುಗಳನ್ನು ಆಡಿದರೆ ನಾವು ಏನುಮಾಡಬೇಕು? ಡಾಕ್ಟರ್ ಅಂಬೇಡ್ಕರ್, ಅವರು ಮಹಾರಾಷ್ಟ್ರದವರು. ಪ್ರತಿ ಊರಿನಲ್ಲೂ ಕೂಡ ಅವರ ಪ್ರತಿಮೆ ಇದೆ. ಪ್ರತಿ ಜಿಲ್ಲೆಯಲ್ಲೂ ಇದೆ. ಅದೇ ಪ್ರಕಾರ ನಮ್ಮ ಡಾಕ್ಟರ್ ವಿಶ್ವೇಶ್ವರಯ್ಯನವರ ಪ್ರತಿಮೆ ಬಾಂಬೆಯ ಕನ್ನಡ ಸಂಘದ ಎದುರುಗಡೆ ಇದೆ, ಮಹಾರಾಷ್ಟ್ರದಲ್ಲೂ ಇದೆ. ಅದೇ ಪ್ರಕಾರ ಮಹಾತ್ಮಾಗಾಂಧಿಯವರು ಗುಜರಾತಿನಲ್ಲಿ ಹುಟ್ಟಿದ್ದು. ಇಡೀ ದೇಶದಲ್ಲಿ ಅವರ ಪ್ರತಿಮೆಯನ್ನು ಹಾಕುತ್ತೇವೆ. ಇಂಥ ರಾಷ್ಟ್ರೀಯ ನಾಯಕರನ್ನು ಇವತ್ತು ನಾವು ರಾಜ್ಯಕ್ಕೆ ಸೀಮಿತವಾಗಿ ಅವರ ವ್ಯಕ್ತಿತ್ವವನ್ನು ಕುಬ್ಜ ಮಾಡುವುದಕ್ಕೆ ಹೊರಟಿರೆ ನಮ್ಮ ಮನಸ್ಸು ಕೂಡ ಕುಬ್ಜವಾಗುತ್ತದೆ. ನಾವು ಸಹ ಸಣ್ಣವರಾಗುತ್ತೇವೆ. ಕನ್ನಡಿಗರು ಇಡೀ ರಾಷ್ಟ್ರದ ದೃಷ್ಟಿಯಲ್ಲಿ ಬಹಳ ಸಣ್ಣದಾಗಿ

ಕಾಣುತ್ತೇವೆ. I can understand. ಬೇರೆ ಯಾರಾದರೂ ಒಂದು ಭಾಷೆಯ ಫೆನಾಟಿಕ್ ಅವರು ರಾಷ್ಟ್ರೀಯ ನಾಯಕರು ಅಲ್ಲದೇ ಇರಬಹುದು, ಅವರ ಪ್ರತಿಮೆಯೇನಾದರೂ ಮಾಡಿದ್ದರೆ ತಾವು ಖಂಡಿತವಾಗಿಯೂ ಕೂಡ ಪ್ರತಿಭಟನೆ ಮಾಡುವುದಕ್ಕೆ ಅರ್ಥ ಇದೆ. ಆದರೆ ಇತಿಹಾಸದಲ್ಲಿ ಪರಂಪರೆಯ ಪ್ರಕಾರ ಅವರು ಬೆಳೆದಂಥ ರೀತಿ, ರಾಷ್ಟ್ರದಲ್ಲಿ ಅವರು ಕೆಲಸ ಮಾಡಿದಂಥ ರೀತಿ, ತಮಗೆ ಗೊತ್ತಿದೆ, ಅವರ ರಾಜ್ಯ ಬರೀ ಮಹಾರಾಷ್ಟ್ರಕ್ಕೆ ಸೀಮಿತವಾಗಿರಲಿಲ್ಲ. ಆಗ ಬಾಂಬೆ-ಕರ್ನಾಟಕಕ್ಕೂ ಕೂಡ ಅವರ ರಾಜ್ಯ ವಿಸ್ತರಿಸಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಶಿವಾಜಿ ತಂದೆ ಬೆಂಗಳೂರಿನಲ್ಲಿ ಸತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಶಿವಾಜಿ ಅವರನ್ನು ಎಂಇಎಸ್‌ನವರು ಬಹಳ ಮೆಚ್ಚುತ್ತಾರೆ ಎಂದು ಹೇಳಿದ ಕೂಡಲೇ ಮಹಾರಾಷ್ಟ್ರ ಎಂದರೆ ಎಂಇಎಸ್ ಅಲ್ಲ. ಅಥವಾ ಶಿವಾಜಿ ಎಂದರೆ ಎಂಇಎಸ್ ಅಲ್ಲ. ಶಿವಾಜಿ ಎಂಇಎಸ್ ನಾಯಕರಲ್ಲ, ಅವರು ರಾಷ್ಟ್ರದ ನಾಯಕರು. ಈಗ ಅದನ್ನು ನೋಡಲಿಕ್ಕೆ ಹೋದರೆ ಕೆಲವೇ ವ್ಯಕ್ತಿಗಳು ಶ್ರೀರಾಮಚಂದ್ರನನ್ನು ಪೂಜಿಸುತ್ತಾರೆ. ನಾವೆಲ್ಲ ಶ್ರೀರಾಮನನ್ನು ಪೂಜಿಸುತ್ತೇವೆ. ಬಿಜೆಪಿಯವರು ಪೂಜಿಸುತ್ತಾರೆ ಎಂದು ಅವರು ದೇವರಲ್ಲ ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ನಾವು ಹಾಗೆ ಹೇಳುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮಗೆ ಸಮೃದ್ಧಿ ಬರುತ್ತಿದೆಯಲ್ಲ; ಅದಕ್ಕೆ ಸಂತೋಷ ಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ನಮ್ಮ ಮನೆ ದೇವರೇ ರಾಮದೇವರು. ನಾವು ಇವತ್ತೂ ಕೂಡ ಪೂಜೆ ಮಾಡುತ್ತೇವೆ. ಯಡಿಯೂರಪ್ಪನವರೇ, ಆದರೆ ನೀವು ಏನು ಆ ದೇವರಿಗೆ ಸ್ವರೂಪ ಕೊಟ್ಟ ಹಾಗೆ ನಾವು ಕೊಡುವುದಿಲ್ಲ. ನೀವು ಆ ದೇವರಿಗೆ ಬೇರೆ ರೂಪ ಕೊಟ್ಟಿದ್ದೀರಿ. ನಿಮ್ಮನ್ನೂ ಟೀಕೆ ಮಾಡಬಹುದು. ಎಂಇಎಸ್ ಅನ್ನು ಟೀಕೆ ಮಾಡಬಹುದು. ಅವರು ಕರ್ನಾಟಕ ರಾಜ್ಯದಲ್ಲಿ ಇಷ್ಟು ವರ್ಷ ಇದ್ದು ಪುನಃ ಈ ಭಾಗ ಮಹಾರಾಷ್ಟ್ರಕ್ಕೆ ಹೋಗಬೇಕು ಎನ್ನುವ ಅವರ ಧೋರಣೆಯನ್ನು ನಾವು ಖಡಾಖಂಡಿತವಾಗಿ ಟೀಕೆ ಮಾಡಬೇಕಾಗುತ್ತದೆ. ಅದನ್ನು ಟೀಕೆ ಮಾಡೋಣ. ಮಹಾಜನ್ ವರದಿ ಜಾರಿ ಮಾಡಬೇಕು ಎಂದು ನಾವು ಹೋರಾಟ ಮಾಡೋಣ. ಅದಕ್ಕೆ ನಾವೆಲ್ಲ ಕಟಿ ಬದ್ಧರಾಗಿ ಕೆಲಸ ಮಾಡೋಣ. ಪರಸ್ಪರ ಕೂಡಿ ಕೆಲಸ ಮಾಡೋಣ. ದೆಹಲಿಯಲ್ಲಿ ಹಿಂದಿ ಭಾಷೆ, ಭಾಗ ಇದೆ. ಆದರೆ ಅಲ್ಲಿ ಎಲ್ಲರ ಪ್ರತಿಮೆಗಳು ಕೂಡ ಇವೆ. ಮುಂದೆ ಏನು ಆಗುತ್ತದೆ ಎಂದರೆ, ಒಂದು ರಾಜ್ಯದ ಸೀಮೆ ದಾಟಿ ಮುಂದೆ ಬರತಕ್ಕ ನಾಯಕರು ಈ ದೇಶದಲ್ಲಿ ಬೆಳೆಯುವುದಕ್ಕೆ ಸಾಧ್ಯವಿಲ್ಲ ಈ ಪ್ರವೃತ್ತಿ ಬೆಳೆದಿದೆ. ಆಯಾಯ ಪ್ರದೇಶಕ್ಕೆ, ಕೊನೆಗೆ ಆಯಾಯ ಜಿಲ್ಲೆಗೆ, ಒಬ್ಬ ನಾಯಕ ಎಂದು ಆಗಿಬಿಡುತ್ತದೆ. ಮುಂದೆ ರಾಷ್ಟ್ರ ನಾಯಕರೇ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಭಾಷೆಯ ದೃಷ್ಟಿಯಿಂದ, ಅಥವಾ ಯಾವುದೇ ಒಂದು ಭಾಷೆ ಮಾತ ಇದನ್ನೆಲ್ಲಾ ನಾವು ದುರುಪಯೋಗ ಮಾಡಿಕೊಂಡು ಹೋದರೆ ಆಯಾಯ ಭಾಷೆಗೆ ಹೊಂದಿದಂತಹ ನಾಯಕರು, ಆಯಾಯ ಜನಾಂಗಕ್ಕೆ ಹೊಂದಿದಂತಹ ನಾಯಕರು, ಆಯಾಯ ರಾಜ್ಯಕ್ಕೆ ಹೊಂದಿದಂತಹ ನಾಯಕರು ಅವರು ಎಷ್ಟೇ ಒಳ್ಳೆಯ ಕೆಲಸ ಮಾಡಲಿ, ಅವರು ಎಷ್ಟೇ ಧೀಮಂತ ನಾಯಕರಾಗಲಿ, ಎಷ್ಟೇ ಉದ್ದಾಮ ನಾಯಕರಾಗಲಿ, ಅವರು ರಾಷ್ಟ್ರಮಟ್ಟಕ್ಕೆ ಬೆಳೆಯುವುದಕ್ಕೇ ಆಗುವುದಿಲ್ಲ. ಬಹುಶಃ ಈ ಪ್ರವೃತ್ತಿ ರಾಷ್ಟ್ರದ ಮಟ್ಟಿಗೂ ರಾಷ್ಟ್ರದ ಭಾವನೆಗಳ ಮಟ್ಟಿಗೂ ಸರಿಯಲ್ಲ. ಇದನ್ನು ನಾವು ಹೆಚ್ಚು ಬೆಳೆಸುವುದಕ್ಕೆ ಕೂಡ ಹೋಗಬಾರದು. ನಮ್ಮ ಭಾಷೆಗಾಗಿ, ಭಾಷೆಯ ಅಭಿವೃದ್ಧಿಗಾಗಿ ಹೋರಾಟ ಮಾಡೋಣ. ನಮ್ಮ

ನುಡಿಗಾಗಿ, ನಮ್ಮ ಜಲಕ್ಕಾಗಿ, ನಮ್ಮ ಸಂಸ್ಕೃತಿಗಾಗಿ ನಮ್ಮ ಸಾಹಿತ್ಯದ ಅಭಿವೃದ್ಧಿಗಾಗಿ ಒಂದು ತ್ಯಾಗ ಬುದ್ಧಿಯಿಂದ ಹೋರಾಟ ಮಾಡೋಣ. ನಿಮ್ಮ ಜೊತೆಯಲ್ಲಿ ನಾವು ಇದ್ದೇವೆ. ಅದಕ್ಕೆ ಎಳ್ಳಷ್ಟೂ ತೊಂದರೆ ಬಾರದ ಹಾಗೆ ನಾವು ಕೆಲಸ ಮಾಡೋಣ. ಆದರೆ ಇದು ತಮ್ಮ ವಿಚಾರ ಕೂಡ ಅಲ್ಲ. ತಾವು ಕನ್ನಡ ನುಡಿಗಾಗಿ ಹೋರಾಟ ಮಾಡಿದಂತಹ ವ್ಯಕ್ತಿ. ನಮ್ಮಲ್ಲಿ ಮುಂದೆ ಕೂಡ ಅನೇಕ ರಾಷ್ಟ್ರ ನಾಯಕರು ಬೆಳೆಯಬೇಕು. ಕರ್ನಾಟಕ, ಕನ್ನಡ ನೆಲದಲ್ಲಿಯೇ ಉಳಿಯತಕ್ಕ ನಾಯಕರನ್ನು ಸಿದ್ಧ ಮಾಡುತ್ತೇವೆ ಎನ್ನುವ ಭಾವನೆ ಬರಬಾರದು. ಸನ್ಮಾನ್ಯ ಶರದ್ ಪವಾರ್ ರವರ ಹತ್ತಿರ ಇವತ್ತು ಬೆಳಿಗ್ಗೆ ಕೂಡ ವಿನಂತಿ ಮಾಡಿಕೊಂಡಿದ್ದೇನೆ. ಇವತ್ತು ಬೆಳಿಗ್ಗೇನೂ ಅಥವಾ ನಿನ್ನೆಯೋ ಈ ವಿಷಯ ಅಲ್ಲ, ಬೇರೆ ವಿಷಯ ಮಾತನಾಡಿದ್ದೇನೆ. ನಾನು ಮರೆತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ: ರಾಜ್ಯ ಸಭೆ ಚುನಾವಣೆ ಬಗ್ಗೆಯೋ?

ಶ್ರೀ ಎಂ. ವೀರಪ್ಪ ಮೊಯಿಲಿ: ರಾಜ್ಯಸಭೆ ಚುನಾವಣೆ ಬಗ್ಗೆ ಅಲ್ಲ. ನಮಗೆ ಸಂಬಂಧಪಟ್ಟಿದ್ದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಎಕ್ಸೈಜ್ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಎಕ್ಸೈಜ್ ಬಗ್ಗೆನೂ ಅಲ್ಲ. ನಮ್ಮದು ಎನ್ಡಿಸಿ ಮೀಟಿಂಗ್ 15ನೇ ತಾರೀಖಿಗೆ ಇದೆ. ಆ ಬಗ್ಗೆ ನಾನು ಮಾತನಾಡಿದೆ. ನಾನು ಹೇಳಿಬಿಡುತ್ತೇನೆ. ನಮ್ಮಲ್ಲಿ ಒಬ್ಬರು ಪ್ರದೇಶ ಕಾಂಗ್ರೆಸ್ ಐ ಅಧ್ಯಕ್ಷರು ಮಹಾರಾಷ್ಟ್ರದಲ್ಲಿದ್ದರು. ಅವರ ಮಗನದೋ ಮಗಳದೋ ಮದುವೆ ಇತ್ತು. ಅದಕ್ಕೆ ನಾನೂ ಹೋಗಬೇಕಿತ್ತು, ಅವರೂ ಹೋಗಬೇಕಿತ್ತು. ಬೇರೆ ವಿಚಾರ ಇಲ್ಲ, ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಬಾಂಬೆಯಲ್ಲಿ ಹಾಕುವುದಿದ್ದರೆ ನಾವು ಅದಕ್ಕೆ ಬೇಕಾದ ಗ್ರಾಂಟ್ ಕೊಡುತ್ತೇವೆ. ಅಲ್ಲಿ ಕನ್ನಡಿಗರು ಯಾರಾದರೂ ಹಾಕಲಿ. ನೀವು ಸ್ವಲ್ಪ ಸಹಾಯ ಮಾಡಿ. ಏಕೆಂದರೆ ಈ ರೀತಿಯ ಭಾವೈಕ್ಯತೆ ಪರಸ್ಪರ ನಾಡು ನಾಡಿನ ಮಧ್ಯೆ ರಾಜ್ಯ ರಾಜ್ಯದ ಮಧ್ಯೆ ಹೆಚ್ಚು ಬೆಳೆಯಬೇಕು. ಇಲ್ಲದಿದ್ದರೆ ನಮ್ಮ ಮನಸ್ಸನ್ನು ಬಹಳ ಸಂಕುಚಿತ ಮಾಡಿ ಮಾಡಿ ನಮ್ಮ ವ್ಯಕ್ತಿತ್ವ ರಾಷ್ಟ್ರದ ಅಭಿವ್ಯಕ್ತಿತ್ವವನ್ನೇ ನಾವು ಕಳೆದುಕೊಳ್ಳುತ್ತೇವೆ. ಇದನ್ನು ಯಾರೂ ಮಾಡಬಾರದು. ಹೌದು, ನಾವು ಒಂದು ತಪ್ಪು ಮಾಡುತ್ತೇವೆ. ಅದೇನೆಂದರೆ,

5.45 ಪಿ.ಎಂ.

ಈಗ ಕಿತ್ತೂರು ರಾಣಿ ಚೆನ್ನಮ್ಮ ಇದ್ದಾರೆ, ಅಥವಾ ಟಿಪ್ಪುಸುಲ್ತಾನ್ ಇದ್ದಾರೆ ಅಥವಾ ಕನ್ನಡ ನಾಡಿದ ಅನೇಕ ಧೀಮಂತ ನಾಯಕರಿದ್ದಾರೆ. ಅವರುಗಳನ್ನು ನಾವು ಅನೇಕ ಬಾರಿ ನಿರ್ಲಕ್ಷಿಸಿದ್ದೇವೆ. ಕನ್ನಡದ ಭಾಷಾ ಅಭಿವೃದ್ಧಿ ಬಗ್ಗೆ ಬರೀ ಭಾಷಣ ಮಾಡುತ್ತೇವೆಯೇ ಹೊರತು ಕನ್ನಡ ನಾಡಿಗಾಗಿ ಹೋರಾಡಿದವರ ಪ್ರತಿಮೆಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗುವುದೆಂದು ಹೇಳುತ್ತಾ ಇವೊತ್ತಿನವರೆಗೂ ಸ್ಥಾಪಿಸಿಲ್ಲ. ಅದಕ್ಕೋಸ್ಕರ ಕಿತ್ತೂರು ರಾಣಿ ಚೆನ್ನಮ್ಮನವರ ಅತ್ಯಂತ ಭವ್ಯವಾದಂಥ ದೊಡ್ಡ ಗಾತ್ರ ಪ್ರತಿಮೆಯನ್ನು ಬೆಂಗಳೂರಿನ ಒಂದು ಪ್ರತಿಷ್ಠಿತ ಸ್ಥಳದಲ್ಲಿ ಸ್ಥಾಪಿಸುವ ಸಲುವಾಗಿ ಈಗಾಗಲೇ ಬೆಂಗಳೂರು ನಗರ ಕಾರ್ಪೊರೇಷನ್ನವರಿಗೆ ತಿಳಿಸಿದ್ದೇವೆ. ಅದಕ್ಕೆ ಬೇಕಾದಂಥ ನೆರವನ್ನು ಕೊಡುತ್ತೇವೆ. ಅಲ್ಲದೆ, ಬೆಂಗಳೂರಿನ ಪ್ರತಿಷ್ಠಿತವಾದಂಥ ರಸ್ತೆಗೆ 'ಕಿತ್ತೂರು ರಾಣಿ ಚೆನ್ನಮ್ಮನವರ ರಸ್ತೆ' ಎಂದು ನಾಮಕರಣ ಮಾಡೋಣ. ಏಕೆಂದರೆ, ತಾವು ಹೇಳಿದಂತೆ ಇದೊಂದು ಭಾವನೆಯ ಪ್ರಶ್ನೆ. ಈ ತರಹದ ವಿಷಯಗಳು ಬಂದಾಗ ಅದು ಭಾವನೆಗಳಲ್ಲಿ ವ್ಯಕ್ತವಾಗುತ್ತವೆ, ಇದರಲ್ಲಿ ಸಂದೇಹವೇ ಇಲ್ಲ. ಬರೀ ಭಾವನೆಗಳು ಮಾತ್ರವಲ್ಲದೆ ಅದರಲ್ಲಿ ಕ್ರೋಧವೂ ಅಡಗಿರುತ್ತದೆ. ಏಕೆಂದರೆ, ಕನ್ನಡ ನಾಡಿನಲ್ಲಿ

ಹುಟ್ಟಿ ಕನ್ನಡ ಪರವಾಗಿ ಹೋರಾಟ ಮಾಡಿದವರ ಬಗ್ಗೆ ನಾವು ಲಕ್ಷ್ಯ ವಹಿಸುವುದಿಲ್ಲ, ಅವರುಗಳನ್ನು ಗಣನೆಗೂ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ, ನಾಡಿನಲ್ಲಿ ಅವರುಗಳ ಬಗ್ಗೆ ಜನರಲ್ಲಿ ಅಭಿಮಾನ ಹುಟ್ಟುವಂಥ ಕೆಲಸವನ್ನು ಸರ್ಕಾರವಾಗಲಿ, ಕಾರ್ಪೊರೇಷನ್‌ಗಳಾಗಲಿ ಮಾಡುವುದಿಲ್ಲ. ಕ್ರೋಧ ಕೆಲವೊಮ್ಮೆ ಬೇರೆ ಸ್ವರೂಪಗಳನ್ನು ತಾಳುತ್ತದೆ. ಆದರಲ್ಲಿ ಇದೂ ಒಂದು ಆಗಿರಬಹುದು. ಆದರೆ, ಅದನ್ನು ನಾನು ಹೇಳುವುದಿಲ್ಲ, ಅದನ್ನು ವಿರೋಧವೆಂತಲೂ ಹೇಳುವುದಿಲ್ಲ. ವಿರೋಧವೆಂಬುದು ಮನಸ್ಸಿನಲ್ಲಿ ಇಲ್ಲದೆ ಇರಬಹುದು. ಆದರೆ, ಮನಸ್ಸಿನಲ್ಲಿ ಹುಟ್ಟುವಂಥ ಕ್ರೋಧಗಳು ಬೇರೆ ಸ್ವರೂಪಗಳನ್ನು ಹೊಂದಲು ಸಾಧ್ಯವಾಗುತ್ತದೆ. ಈ ತರಹ ವಿಕೃತ ಸ್ವರೂಪವನ್ನು ತಾಳುವುದಕ್ಕೂ ಸಾಧ್ಯವಾಗುತ್ತದೆ. ಆದುದರಿಂದ, ಇದರ ಬಗ್ಗೆ ಹೆಚ್ಚು ವಿವಾದಕ್ಕೆಡೆ ಮಾಡದೆ ಸಮಾಧಾನದಿಂದ ನಡೆದುಕೊಳ್ಳಬೇಕಾಗಿದೆ. ಏಕೆಂದರೆ, ತಮಗೆಲ್ಲಾ ಗೊತ್ತಿರುವಂತೆ ಲಕ್ಷಾಂತರ ಕನ್ನಡಿಗರು ಬೊಂಬಾಯಿಯಲ್ಲಿದ್ದಾರೆ ಮತ್ತು ಮಹಾರಾಷ್ಟ್ರ ರಾಜ್ಯದಲ್ಲಿದ್ದಾರೆ. ಅವರು ಅಲ್ಲಿ ದೊಡ್ಡ ದೊಡ್ಡ ಉದ್ದಿಮೆಗಳನ್ನು ಸ್ಥಾಪಿಸಿ, ಕನ್ನಡದ ಬಗ್ಗೆ ಬಹಳ ಅಭಿಮಾನದಿಂದ ನಡೆದುಕೊಂಡು ದೊಡ್ಡ ದೊಡ್ಡ ಕನ್ನಡ ಸಂಘಗಳನ್ನು ಕಟ್ಟಿ ಆ ಭಾಗದಲ್ಲಿ ವಾಸವಾಗಿದ್ದಾರೆ. ಆದುದರಿಂದ, ಈ ರೀತಿಯಲ್ಲಿ ಜನರ ಮನಸ್ಸುಗಳನ್ನು ಕದಡುವುದರಿಂದ ಅಲ್ಲಿ ನೆಲೆಸಿರುವ ಕನ್ನಡಿಗರ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆಂದು ತಾವು ಆಲೋಚಿಸಬೇಕು. ನಾವೇನೂ ಇಲ್ಲಿ ಸುರಕ್ಷಿತವಾಗಿರುತ್ತೇವೆ. ಆದರೆ, ಹೊರನಾಡಿನಲ್ಲಿರುವ ಕನ್ನಡಿಗರೂ ಕೂಡ ಸುರಕ್ಷಿತವಾಗಿ ಬೆಳೆಯಬೇಕಾಗುತ್ತದೆ; ಬೆಳೆದಿದ್ದಾರೆ. ಅನೇಕ ಮಂದಿ ಕನ್ನಡಿಗರು ಯಾವುದೇ ತೊಂದರೆ, ಆತಂಕಗಳಿಲ್ಲದೆ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಮೆರೆದಿದ್ದಾರೆ. ಒಳ್ಳೊಳ್ಳೆಯ ಸ್ಥಾನಗಳನ್ನು ಗಳಿಸಿದ್ದಾರೆ, ಉತ್ತಮ ಉದ್ಯಮಿಗಳಾಗಿದ್ದಾರೆ. ಆ ರೀತಿ ಹೊರನಾಡುಗಳಲ್ಲಿ ಹೋಗಿ ನೆಲೆಸಿರುವ ಲಕ್ಷಾಂತರ ಮಂದಿ ಕನ್ನಡಿಗರ ಯೋಗಕ್ಷೇಮದ ಬಗ್ಗೆ ಕೂಡ ಇವೊತ್ತಿನ ದಿವಸ ಇಲ್ಲಿ ಕುಳಿತುಕೊಂಡು ತಾವು ವಿಚಾರ ಮಾಡಬೇಕಾಗುತ್ತದೆ. ಜನರ ಮನಸ್ಸುಗಳನ್ನು ಕದಡುವುದು ಬಹಳ ಸುಲಭ. ಆದರೆ, ಅದನ್ನು ಪುನಃ ಹತೋಟಿಗೆ ತಂದು ನೆಮ್ಮದಿ ಸ್ಥಾಪನೆ ಮಾಡುವುದು ಬಹಳ ಕಷ್ಟ. ಆದುದರಿಂದ, ಮಾನ್ಯ ಅಧ್ಯಕ್ಷರ ಮೂಲಕ ಮತ್ತು ಸದನದ ಮುಖಾಂತರ ಈ ನಾಡಿನ ಜನತೆಗೆ ತಿಳಿಸುವುದೇನೆಂದರೆ, ಶಿವಾಜಿ ಒಬ್ಬ ಮಹಾನ್ ರಾಷ್ಟ್ರನಾಯಕರಾಗಿದ್ದು, ಅವರಿಗೆ ಸಲ್ಲಿಸತಕ್ಕಂಥ ಗೌರವದಲ್ಲಿ ಯಾವುದೇ ರೀತಿ ಚ್ಯುತಿ ಬಾರದಂತೆ, ಯಾವುದೇ ವರ್ಗದ ಜನರ ಭಾವನೆಗಳನ್ನು ಕೆರಳಿಸುವುದಕ್ಕೆ ಅನುವು ಮಾಡಿಕೊಡದೆ ಇದರ ಬಗ್ಗೆ ಇಲ್ಲಿಗೆ ಮುಕ್ತಾಯ ಮಾಡುವುದೊಳ್ಳೆಯದು. ಮತ್ತು ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಯನ್ನು ಬಹಳ ಪ್ರತಿಷ್ಠಿತವಾದ ಸ್ಥಳದಲ್ಲಿ ಅತ್ಯಂತ ಭವ್ಯವಾಗಿ, ಅತಿ ಎತ್ತರವಾಗಿ, ಅದ್ಭುತವಾಗಿ ರಾಜಧಾನಿಯಾದ ಬೆಂಗಳೂರಿನಲ್ಲಿ ಸ್ಥಾಪಿಸುತ್ತೇವೆ. ಅಲ್ಲದೆ, ಬೊಂಬಾಯಿಯಲ್ಲೂ ಕೂಡ ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಯನ್ನು ಸ್ಥಾಪಿಸುವುದಕ್ಕೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಮಾತನಾಡುವುದಕ್ಕೆ ಪುನಃ ಈ ಪ್ರಸ್ತಾವವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾ, ಕನ್ನಡ ನಾಡಿನಲ್ಲಿ ಈ ವಿಚಾರಕ್ಕೆ ಇಲ್ಲಿಯೇ ಪೂರ್ಣ ವಿರಾಮ ಹಾಕುವುದು ಒಳ್ಳೆಯದೆಂದು ನಾನು ವಿಶೇಷವಾಗಿ, ವಿನಂತಿಯಿಂದ, ಬಹಳ ನಮ್ರತೆಯಿಂದ ಕರೆಯನ್ನು ಕೊಡುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇವರ ಉಪದೇಶವನ್ನು ಕೇಳಿದೆ. ನಾವು ಇಲ್ಲಿ ಯಾರೂ ಕೂಡ 'ಅವರು ರಾಷ್ಟ್ರ ನಾಯಕರಲ್ಲ' ಎನ್ನತಕ್ಕಂಥ ಚರ್ಚೆ ಮಾಡುತ್ತಿಲ್ಲ, ಅಥವಾ ಶಿವಾಜಿ ರಾಷ್ಟ್ರ ನಾಯಕರಲ್ಲ, ಅವರಿಂದ ದೇಶಕ್ಕೆ ಅನಾಹುತವಾಗಿದೆಯೆಂತಲೂ ಚರ್ಚಿಸುತ್ತಿಲ್ಲ. ನಾವು ಚರ್ಚೆ ಮಾಡುತ್ತಿರತಕ್ಕಂಥಾದ್ದು 'ಮನೆಗೆ ಮಾರಿ ಪರರಿಗೆ ಉಪಕಾರಿ' ಎಂಬ ನೀತಿ ಕರ್ನಾಟಕದವರು ಇದೆಯೆಲ್ಲಾ, ಅದು ಆಗಬಾರದು ಎಂದು; ಕರ್ನಾಟಕದಲ್ಲಿ ಹುಟ್ಟಿರುವವರೆಲ್ಲರೂ ಬರೀ ಉಪದೇಶ

ಕೊಡುವುದರಲ್ಲಿಯೇ ಇದ್ದಾರೆ. ರಾಜ್ಯದ ಬಗ್ಗೆ ನಿಮಗಿರುವ ಚಿಂತನೆ ಏನು? ಪ್ರತಿಮೆಯನ್ನು ಸ್ಥಾಪಿಸುವುದಕ್ಕೆ ನಾಲ್ಕು ವರ್ಷಗಳ ಮುಂಚೆ ಅಲ್ಲಿನ ಮುಖ್ಯಮಂತ್ರಿಗಳನ್ನು ಮರಾಠಾ ಮಂಡಳಿಯವರು ಕೇಳಿದರು. ಆ ರೀತಿ ಕೇಳಿದವರು ಕನ್ನಡಿಗರಲ್ಲ. ಈ ರಾಜ್ಯದ ಮರಾಠಾ ಮಂಡಳಿಯವರು ತಮ್ಮ ಪ್ರಭುತ್ವವನ್ನು ಬೆಳೆಸುವುದಕ್ಕೋಸ್ಕರ ಇಲ್ಲೊಂದು ಶಿವಾಜಿ ಪ್ರತಿಮೆ ಸ್ಥಾಪಿಸಬೇಕೆಂದು ಹೊರಟಾಗ ನೀವು ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ಹೇಳಬೇಕಾಗಿತ್ತು. ಏನೆಂದರೆ, ಕರ್ನಾಟಕದ ಇತಿಹಾಸ ಪುರುಷರು ಯಾರಿದ್ದಾರೆ, ಅವರು ರಾಣಿ ಕಿತ್ತೂರು ಚೆನ್ನಮ್ಮ ಆಗಿರಬಹುದು, ಯಾರೇ ಆಗಿರಬಹುದು. ಮೊದಲು ಅವರ ಪ್ರತಿಮೆಯನ್ನು ನೀವು ಅಲ್ಲಿ ಸ್ಥಾಪಿಸುತ್ತೀರಾ? ಎಂದು ಕೇಳಿ ಅದಕ್ಕೆ ಅವರು ಒಪ್ಪಿದಾಗ ಶಿವಾಜಿ ಪ್ರತಿಮೆಯನ್ನು ಇಲ್ಲಿ ಸ್ಥಾಪಿಸಬೇಕಾಗಿತ್ತೇ ಹೊರತು, ಇಲ್ಲಿ ಪ್ರತಿಮೆಯನ್ನು ಸ್ಥಾಪಿಸಿದರೆ ಜನರು ಪ್ರತಿಭಟಿಸಲು ಬರುತ್ತಾರೆಂದು ರಾತ್ರೋರಾತ್ರಿ ಆ ಪ್ರತಿಮೆಯನ್ನು ಉದ್ಘಾಟಿಸುವ ಪಿತೂರಿ ನಡೆಯಿತು. ಈ ಬಗ್ಗೆ ಎರಡು ಬಾರಿ ಸದನದ ಒಳಗೆ ಮತ್ತು ಹೊರಗಡೆ ಉಪದೇಶ ಕೊಟ್ಟಿದ್ದಾಯಿತು. ನಾವು ಕೇವಲ ಉಪದೇಶಗಳನ್ನು ಕೊಡುವುಷ್ಟರ ಮಟ್ಟಕ್ಕೆ ತಲುಪಿದ್ದೇವೆ. ರಾಷ್ಟ್ರಾಭಿಮಾನ ಇರಬೇಕು, ನಿಜ. ರಾಷ್ಟ್ರದ ಬಗ್ಗೆ ನಾನೆಂದಿಗೂ ವಿರೋಧ ಮಾಡಿದವನಲ್ಲ, ರಾಷ್ಟ್ರದ ಬಗ್ಗೆ ನನಗೆ ಅಪಾರವಾದ ಗೌರವವಿದೆ, ರಾಷ್ಟ್ರಕ್ಕಾಗಿ ನನ್ನ ರಕ್ತವನ್ನೂ ಸಹ ಕೊಡಲು ಸಿದ್ಧನಾಗಿದ್ದೇನೆ. ಆ ಪ್ರಶ್ನೆ ಬೇರೆ. ಆದರೆ, ಇವೊತ್ತು ಈ ನಾಡಿನ ಪರಿಸ್ಥಿತಿ ಏನಾಗಿದೆ? ನಾವು ದಿನೇ ದಿನೇ ತಬ್ಬಲಿಗಳಾಗುತ್ತಿದ್ದೇವೆ, ನಾವುಗಳು ದುರಂತಕ್ಕೆ ಸಿಲುಕಿದ್ದೇವೆ, ಕರ್ನಾಟಕದ ಪರಿಸ್ಥಿತಿ ಅತ್ಯಂತ ದುರಂತಮಯವಾಗಿದೆ. ಉಪದೇಶ ಕೊಡತಕ್ಕಂಥವರು ನಮ್ಮಲ್ಲಿ ಬಹಳ ಜನರಿದ್ದಾರೆ. ಈ ಭಾರತ ದೇಶದಲ್ಲಿ ಉಪದೇಶ ಕೊಡತಕ್ಕಂಥವವರು ಯಾರಾದರೂ ಇದ್ದರೆ ಅದು ಕನ್ನಡಿಗರು ಮಾತ್ರ, ಇದು ದುರ್ದೈವದ ಸಂಗತಿಯಾಗಿದೆ. ಆದುದರಿಂದ, ಇವೊತ್ತು ನೀವು ಇದರ ಬಗ್ಗೆ ಸುದೀರ್ಘವಾಗಿ ಮಾತನಾಡಿ ಕಿತ್ತೂರು ರಾಣಿ ಚೆನ್ನಮ್ಮನವರ ಪ್ರತಿಮೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದಾಗಿ ಏನು ಹೇಳಿದ್ದೀರಿ, ಅವರ ಪ್ರತಿಮೆಯನ್ನು ಸ್ಥಾಪಿಸಬೇಕಾದರೆ ಯಾರ ಅಪ್ಪಣೆಯೂ ಬೇಕಾಗಿಲ್ಲ. ಇದೇ ಒಂದು ಗಟ್ಟಿತನದಲ್ಲಿ ಮಹಾರಾಷ್ಟ್ರ ಶಾಸನ ಸಭೆಯಲ್ಲಿ ಆಗಲಿ, ಮಹಾರಾಷ್ಟ್ರದಲ್ಲಾಗಲಿ ಶ್ರೀಮಾನ್ ಶರದ್ಪವಾರ್‌ರವರು ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಹಾಕಿಯೇ ಹಾಕುತ್ತೇವೆಂದು ಹೇಳಲಿಲ್ಲ ಎಂದೂ ಹೇಳಿಲ್ಲ. ವಿಶ್ವೇಶ್ವರಯ್ಯನವರ ಬಗ್ಗೆ ಮಾತನಾಡುತ್ತೀರಿ. ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಅವರು ಪ್ರೀತಿಗೋಸ್ಕರ ಹಾಕಲಿಲ್ಲ. ವಿಶ್ವೇಶ್ವರಯ್ಯನವರು ಅಲ್ಲಿ ತ್ಯಾಗ ಮಾಡಿದ್ದಾರೆ. ಅವರ ರಾಜ್ಯದಲ್ಲಿಯೂ ವಿಶ್ವೇಶ್ವರಯ್ಯನವರು ಕೆಲಸ ಮಾಡಿದ್ದಾರೆ. ಅವರು ಇಂಜಿನಿಯರ್‌ಗಾಗಿ ಆ ರಾಜ್ಯಕ್ಕೆ ಕೊಟ್ಟಂಥ ಕೊಡುಗೆಗೋಸ್ಕರ ಅವರ ಪ್ರತಿಮೆಯನ್ನು ಹಾಕಿದ್ದಾರೆಯೇ ಹೊರತು ಸುಮ್ಮನೆ ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಅಲ್ಲಿ ಹಾಕಲಿಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ, ತಮ್ಮ ಈ ಉಪದೇಶ ಬೇಡ. ನಿಮ್ಮ ಬಗ್ಗೆ ನನಗೆ ಬಹಳ ಗೌರವವಿದೆ. ಆದರೆ ತಮ್ಮ ಈ ನೀತಿ ಏನಿದೆ, ಇದು ನಿಜವಾಗಲೂ ದೇವರ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ, ಇದರಿಂದ ನನಗೆ ಬಹಳ ವೇದನೆಯಾಗಿದೆ. ನಮ್ಮ ಕರ್ನಾಟಕ ತಬ್ಬಲಿಯಾಗುತ್ತಿದೆ. ನಮ್ಮ ಕರ್ನಾಟಕವನ್ನು ಕಡೆಗಣಿಸಿದ್ದೀರಿ, ಕರ್ನಾಟಕ ಮಲತಾಯಿ ರೀತಿಯಲ್ಲಿದೆ ಎನ್ನತಕ್ಕ ನೋವಿನಿಂದ ನಾನು ಹೇಳುತ್ತಿದ್ದೇನೆ. ನಾನೆಷ್ಟೇ ಹೇಳಿದರೂ ನೀವು ಅದನ್ನು ಒಪ್ಪುವ ಮಟ್ಟದಲ್ಲಿಲ್ಲ. ಮತ್ತು ನಿಮ್ಮ ಉಪದೇಶ ಇದ್ದೇ ಇರುತ್ತದೆ. ನನಗಾಗಿರುವ ಆ ಒಂದು ಸಂಕಟದಿಂದ, ನೋವಿನಿಂದ ನನಗೆ ಈ ಸಭೆಯಲ್ಲಿ ಕುಳಿತುಕೊಳ್ಳಲು ನೋವಾಗಿದೆ, ಆದ್ದರಿಂದ ನಾನು ಈ ಸಭೆಯಿಂದ ಹೊರಗಡೆ ಹೋಗುತ್ತಿದ್ದೇನೆ.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎನ್.ಜಿ. ನಾಯಕ್ : ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಿರತಕ್ಕದ್ದು ಸರಿಯಲ್ಲ, ಕನ್ನಡ ನಾಡಿಗೆ ಒಳ್ಳೆಯ ಆಡಳಿತವನ್ನು ಕೊಟ್ಟು ಕನ್ನಡ ನಾಡಿಗೆ ಜೀವವನ್ನು ಕೊಟ್ಟಿರತಕ್ಕಂಥ ಶಿವಾಜಿಯ ಪ್ರತಿಮೆಯನ್ನು ಸ್ಥಾಪನೆ ಮಾಡಿರತಕ್ಕದ್ದು ತಪ್ಪಲ್ಲ. ಶಿವಾಜಿಯ ಪ್ರತಿಮೆಯನ್ನು ಸ್ಥಾಪನೆ ಮಾಡಲೇಬೇಕು. ವಾಟಾಳ್ನಾಗರಾಜ್ರವರೊಬ್ಬರು ಹೇಳಿದರೆ ಇಲ್ಲಿ ಆಗುವುದಿಲ್ಲ.

ವಿತ್ತೀಯ ಕಾರ್ಯಕಲಾಪಗಳು

1993-94ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಮೊದಲನೆ ಕಂತು ಮತ್ತು ಎರಡನೆ ಕಂತು) ಮೇಲಿನ ಚರ್ಚೆ

ಉಪಾಧ್ಯಕ್ಷರು : 1993-94ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಮೊದಲನೆ ಕಂತು ಮತ್ತು ಎರಡನೆ ಕಂತು ಮೇಲೆ ಚರ್ಚೆ)

+ಶ್ರೀ ಹೆಚ್. ವಿಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಉಪಾಧ್ಯಕ್ಷರೆ, 1993-94ನೇ ಸಾಲಿನ ಮೊದಲನೆಯ ಮತ್ತು ಎರಡನೆ ಕಂತಿನ ಪೂರಕ ಅಂದಾಜುಗಳನ್ನು ಸಭೆಯ ಮುಂದೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಮಂಡಿಸಿದ್ದಾರೆ. ಮೊದಲನೆಯ ಕಂತನ್ನು 3-9-1993ರಂದು ಈ ಸಭೆಯ ಮುಂದೆ ಮಂಡಿಸಲಾಗಿದೆ. ಇದುವರೆಗೂ ಸಹ ಅದರ ಬಗ್ಗೆ ಚರ್ಚೆಯಾಗಲಿಲ್ಲ. ಎರಡನೆಯ ಕಂತು ಇತ್ತೀಚೆಗೆ, ಅಂದರೆ 17-1-1994ರಂದು ಈ ಸಭೆಯ ಮುಂದೆ ಮಂಡಿಸಲಾಯಿತು. ಆದುದರಿಂದ ನನ್ನ ವಿನಂತಿ ಏನೆಂದರೆ, ಇದು ಬೇರೆ ಬೇರೆ ಅಧಿವೇಶನಗಳಲ್ಲಿ ಮಂಡಿಸಲ್ಪಟ್ಟಿದ್ದರೂ ಸಹ ಇವೆರಡು ಕಂತುಗಳನ್ನು ಒಟ್ಟಾಗಿ ತೆಗೆದುಕೊಳ್ಳಬೇಕಾಗಿರತಕ್ಕದ್ದು ಅವಶ್ಯಕವೆಂದು ನನ್ನ ಅನಿಸಿಕೆ. ಮತ್ತು ಮಾನ್ಯ ಮುಖ್ಯಮಂತ್ರಿಗಳು ಎರಡು ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಏನೆಂದರೆ ಎರಡು ಪೂರಕ ಅಂದಾಜುಗಳ ಬಾಬ್ತು ಒಂದೇ ಒಂದನ್ನು ಮಂಡಿಸಲು ಅವಕಾಶವಿದೆ. ಬೇರೆ ಬೇರೆ ಅಧಿವೇಶನಗಳಲ್ಲಿ ಪೂರಕ ಅಂದಾಜುಗಳನ್ನು ಮಂಡಿಸಲ್ಪಟ್ಟಿದ್ದರೂ ಸಹ ಅವುಗಳು ಒಟ್ಟಾಗಿ ಚರ್ಚೆಯಾಗಬೇಕಾಗಿರತಕ್ಕದ್ದು ಅವಶ್ಯಕ. ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕೇಳಿಕೊಳ್ಳುವುದೇನೆಂದರೆ, ಎರಡು ಧನವಿನಿಯೋಗ ವಿಧೇಯಕಗಳನ್ನೇನು ತಾವು ಪ್ರತ್ಯೇಕವಾಗಿ ಮಂಡಿಸಿದ್ದೀರಿ, ಅದರ ಬದಲು ಒಂದೇ ವಿಧೇಯಕವನ್ನು ತಾವು ಮಂಡಿಸಲು ಮತ್ತು ಆ ಬಗ್ಗೆ ಪರಿಶೀಲನೆ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಮಾನ್ಯ ಉಪಾಧ್ಯಕ್ಷರು ಈ ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಬೇಕೆಂದು ಒಂದು ಅಪ್ಪಣೆಯನ್ನು ಕೊಡಿಸಿದ್ದಾರೆ. ನಾನು ಸಹ ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ. ತಾವು ಏನು ಈ ಸಭೆಯ ಮುಂದೆ ಹೋದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ಒಂದು ಪೂರಕ ಅಂದಾಜು ಮಂಡಿಸಿದ್ದೀರಿ, ಮತ್ತು ಮೊನ್ನೆ 17ನೇ ತಾರೀಖು ಒಂದು ಪೂರಕ ಅಂದಾಜನ್ನು ಈ ಸಭೆಯ ಮುಂದೆ ಇಟ್ಟಿದ್ದೀರಿ, ಈ ಒಂದು ಮತ್ತು ಎರಡನೆಯ ಪೂರಕ ಅಂದಾಜುಗಳು ಏನಿವೆ, ಇವುಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಇದಕ್ಕೆ ತಮ್ಮ ಆಕ್ಷೇಪಣೆ ಏನೂ ಇಲ್ಲದಿದ್ದರೆ ನಾನು ಎಲ್ಲವನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಬಹುದು.

ಶ್ರೀ ಹೆಚ್. ವಿಕಾಂತಯ್ಯ : ಅದೇ ರೀತಿ ಧನ ವಿನಿಯೋಗ ಮಸೂದೆ ಸಹ ಅತ್ಯವಶ್ಯಕ ಏನಿಸಿದರೆ ಒಟ್ಟಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಆದುದರಿಂದ